2270(2826) ಶ್ರೀ ಜಿ. ಬಸವಣ್ಣೆಪ್ಪ (ಹೊಳೆಹೊನ್ನೂರು):- ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ರಾಜ್ಯದಲ್ಲಿರುವ ಒಟ್ಟು ಕೆರೆಗಳ ಸಂಖ್ಯೆ ಎಷ್ಟು;

ಆ) ಅವುಗಳಲ್ಲಿ ದುಸ್ಥಿತಿಯಲ್ಲಿರುವ ಕೆರೆಗಳನ್ನು ಸುಸ್ಥಿತಿಗೆ ತರಲು ಸರ್ಕಾರ ಯೋಚಿಸಿರುವ ಕ್ರಮಗಳೇನು ಹಾಗೂ ಇದಕ್ಕೆ ತಗಲುವ ವೆಚ್ಚ ಎಷ್ಟು;

ಇ) ಇವುಗಳಲ್ಲಿ ಹೊಳೆತ್ತಿರುವ ಕೆರೆಗಳ ಸಂಖ್ಯೆ ಎಷ್ಟು?

ಶ್ರೀ ಮಲ್ಲಿಕಾರ್ಜುನ ಖರ್ಗೆ:- (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಸಣ್ಣ ನೀರಾವರಿ ವ್ಯಾಪ್ತಿಯಲ್ಲಿ 3354 ಕೆರೆಗಳಿವೆ.

ಆ) ಕೆರೆಗಳ ಆಧುನೀಕರಣ, ಕೆರೆಗಳ ಹೂಳು ಎತ್ತುವುದು, ಕೆರೆಗಳ ಸುದಾರಣೆ ಅಡಿ ಹಾಗೂ ಜಲ ಸಂವರ್ಧನೆ ಸಂಘದ ಮೂಲಕ ಅನುದಾನದ ಲಭ್ಯತೆ ಆಧಾರದ ಮೇಲೆ ಕ್ರಮಕ್ಕೈಗೊಳ್ಳಲಾಗುತ್ತಿದೆ. ಎಲ್ಲಾ ಕೆರೆಗಳನ್ನು ಸುಸ್ಥಿತಿಗೆ ತರಲು ಸುಮಾರು ರೂ. 500 ಕೋಟಿಗಳು ಬೇಕಾಗಿದೆ.

ಇ) 1223 ಕೆರೆಗಳಲ್ಲಿ ಭಾಗಶ: ಹೂಳು ತೆಗೆಯಲಾಗಿದೆ.

2271 (2827) ಶ್ರೀ ಜಿ. ಬಸವಣ್ಣೆಪ್ಪ (ಹೊಳೆಹೊನ್ನೂರು):- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ನಗರದ ಒಟ್ಟು ಜನಸಂಖ್ಯೆ ಎಷ್ಟು (1-4-2004) ರವರೆಗೆ)?

ಆ) ಈ ಜನಸಂಖ್ಯೆಗೆ ಬೆಂಗಳೂರು ಜಲಮಂಡಲಿ ಸರಬರಾಜು ಮಾಡುವ ಒಟ್ಟು ನೀರಿನ ಪ್ರಮಾಣ ಎಷ್ಟು?

ಇ) ಜಲಮಂಡಳಿ ಪ್ರತಿಯೊಬ್ಬ ವ್ಯಕ್ತಿಗೆ ಒದಗಿಸುವ ಸರಾಸರಿ ನೀರಿನ ಪ್ರಮಾಣ ಎಷ್ಟು?

ಈ) ಜಲಮಂಡಳಿಯ ಪ್ರತಿ ವರ್ಷದ ನಷ್ಟದ ಪ್ರಮಾಣ ಎಷ್ಟು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು):

ಅ) ಏಪ್ರಿಲ್ 2004ರವರೆಗೆ ಬೆಂಗಳೂರು ನಗರದ ಜನಸಂಖ್ಯೆ ಸುಮಾರು 70 ಲಕ್ಷ ಎಂದು ಅಂದಾಜು ಮಾಡಲಾಗಿದೆ.

ಆ) ಬೆಂಗಳೂರು ಜಲಮಂಡಳಿ ಸರಬರಾಜು ಮಾಡುವ ಒಟ್ಟು ನೀರಿನ ಪ್ರಮಾಣ ದಿನಂ ಪ್ರತಿ 860 ದಶ ಲಕ್ಷ ಲೀಟರ್.

ಇ) ಬೆಂಗಳೂರು ಜಲಮಂಡಳಿ ಪ್ರತಿಯೊಬ್ಬ ವ್ಯಕ್ತಿಗೆ ದಿನಂ ಪ್ರತಿ ಸುಮಾರು 115 ಲೀಟರಿನಷ್ಟು ನೀರನ್ನು ಒದಗಿಸುತ್ತಿರುತ್ತದೆ.

ಈ) ಪ್ರತಿ ವರ್ಷ ನಷ್ಟದ ನೀರಿನ ಪ್ರಮಾಣ ಶೇ. 32ರಿಂದ ಶೇ. 34 ರವರೆಗೆ ಇರುತ್ತದೆ.